# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 19

ಸ್ವಾಮಿ ನಿತ್ಯಸ್ಥಾನಂದ



## ವಿವೇಕ-ವೈರಾಗ್ಯ

ಶ್ರೀರಾಮಕೃಷ್ಣರ ಶ್ರೀವಾಣಿ ಮುಂದುವರಿಯುತ್ತದೆ:

“ನಾನು ರಾಜಸಿಕ ಭಾವ ಆರೋಪಿಸಿಕೊಳ್ಳುತ್ತಿದ್ದೆ — ತ್ಯಾಗ ಮಾಡುವ ಸಲುವಾಗಿ. ಒಮ್ಮೆ ಇಚ್ಛೆ ಬಂತು, ಚಿನ್ನದ ಜರಿ ಹಾಕಿರುವ ಪೋಷಾಕು ಉಡಬೇಕು, ಬೆರಳಿಗೆ ಉಂಗುರ ಹಾಕಿಕೊಳ್ಳಬೇಕು, ಉದ್ದವಾದ ಕೊಳವೆಯುಳ್ಳ ಗುಡುಗುಡಿಯಿಂದ ತಂಬಾಕು ಸೇದಬೇಕು ಎಂಬುದಾಗಿ. ಮಥುರಬಾಬು ಎಲ್ಲವನ್ನೂ ತಂದೊದಗಿಸಿದ. ಚಿನ್ನದ ಜರಿಯಿರುವ ಪೋಷಾಕು ಉಟ್ಟುಕೊಂಡೆ. ಸ್ವಲ್ಪ ಹೊತ್ತಿನ ಮೇಲೆ ಮನಸ್ಸಿಗೆ ಹೇಳಿದೆ: ‘ಹೇ ಮನಸ್ಸೇ! ಚಿನ್ನದ ಜರಿಯ ಪೋಷಾಕು ಎಂಬುದು ಇದೇ.’ ಬಳಿಕ ಎಲ್ಲವನ್ನೂ ಬಿಚ್ಚಿ ಒಂದು ಕಡೆ ಬಿಸಾಡಿಬಿಟ್ಟೆ. ಮತ್ತೆ ಅದರ ಮೇಲೆ ಇಚ್ಛೆಯಾಗಲಿಲ್ಲ. ಮತ್ತೆ ನಾನು ಮನಸ್ಸಿಗೆ ಹೇಳಿದೆ: ‘ಮನಸ್ಸೇ! ಇದಕ್ಕೆ ಶಾಲು ಅಂತ ಹೆಸರು. ಉದ್ದವಾದ ಕೊಳವೆಯಿಂದ ತಂಬಾಕು ಸೇದುವುದು ಇದೇನೆ’ ಬಳಿಕ ಎಲ್ಲವನ್ನೂ ಬಿಸಾಡಿಬಿಟ್ಟೆ. ಮತ್ತೆ ಅವು ಬೇಕೆಂದು ಮನಸ್ಸು ಕೇಳಲಿಲ್ಲ.”

ಎಲ್ಲರೂ ಆಸೆಪಡುವ ಈ ಭೋಗವಸ್ತುಗಳಲ್ಲಿ ಏನಾದರೂ ಸುಖವಿದೆಯೆ? ಎಂದು ಪರೀಕ್ಷಿಸುವುದು. ಇದಕ್ಕೆ ವಿಚಾರ ಬುದ್ಧಿ ಬಲವಾಗಿರಬೇಕು, ಮತ್ತು ವೈರಾಗ್ಯವೂ ತೀವ್ರವಾಗಿರಬೇಕು. ಹಾಗಿಲ್ಲದೆ ಶ್ರೀರಾಮಕೃಷ್ಣರು ಮಾಡಿದಂತೆ ಆಚರಿಸಲು ಹೋದರೆ ಜಾರಿಬೀಳುವ ಸಂಭವವಿದೆ. ನದಿಯ ಆಳವನ್ನು ಅಳೆಯಲು ಹೋಗಿ ಅದರಲ್ಲೇ ಮುಳುಗಿದಂತಾಗುತ್ತದೆ. ಇಂದಿನ ಕಾಲದಲ್ಲಾಗಿದ್ದರೆ, ಶ್ರೀರಾಮಕೃಷ್ಣರು ಸ್ಮಾರ್ಟ್‌ಫೋನ್‌ನ್ನು ತರಿಸಿ, ಸ್ವಲ್ಪ ಹೊತ್ತು ಉಪಯೋಗಿಸಿ ಬಿಸಾಕಿಬಿಡುತ್ತಿದ್ದರು.

ಶ್ರೀರಾಮನ ಪಟ್ಟಾಭಿಷೇಕದ ಸಂದರ್ಭದಲ್ಲಿ , ಸೀತಾದೇವಿಯು ಆಂಜನೇಯನಿಗೆ ಒಂದು ಮುತ್ತಿನ ಹಾರವನ್ನು ಬಹುಮಾನವಾಗಿ ನೀಡಿದಳು. ಅವನು ಅದನ್ನು ಭಕ್ತಭಾವದಿಂದ ಸ್ವೀಕರಿಸಿದನಾದರೂ ಅದರ ಒಂದೊಂದು ಮುತ್ತನ್ನೂ ಕಚ್ಚಿ ಕಚ್ಚಿ ನೋಡುತ್ತಿದ್ದ. ಎಲ್ಲರಿಗೂ ಅವನ ಆಚರಣೆಯನ್ನು ನೋಡಿ ನಗು. ಲಕ್ಷ್ಮಣನು ಹೇಳಿದನು: “ಎಷ್ಟಾದರೂ ಕಪಿ ತಾನೆ, ಆ ಮಂಗಬುದ್ಧಿ ಎಲ್ಲಿಗೆ ಹೋಗುತ್ತದೆ. ಅದಕ್ಕೇ ಮುತ್ತನ್ನು ಕಚ್ಚಿಕಚ್ಚಿ ಕಪಿಚೇಷ್ಟೆ ಮಾಡುತ್ತಿದ್ದಾನೆ.” ಶ್ರೀರಾಮನು ತಮ್ಮನ ಮಾತನ್ನು ಕೇಳಿ, “ಅವನ ಈ ವಿಚಿತ್ರ ವರ್ತನೆಗೆ ಕಾರಣವೇನೆಂದು ಆಂಜನೇಯನನ್ನೇ ಕೇಳು” ಎಂದು ಸೂಚಿಸಿದನು. ಲಕ್ಷ್ಮಣನು ಆಂಜನೇಯನನ್ನು ಕೇಳಿದಾಗ, ಅವನು ಹೇಳಿದ, “ಆ ಮುತ್ತಿನೊಳಗೆ ರಾಮನಿರುವನೇ ಎಂದು ಪರೀಕ್ಷಿಸುತ್ತಿದ್ದೇನೆ” ಎಂದು. ಈ ರೀತಿ ವಿಚಾರ ಮಾಡಬೇಕೆಂದು ಸ್ವಾಮಿ ಅದ್ಭುತಾನಂದರು (ಲಾಟೂ ಮಹಾರಾಜರು) ಹೇಳುತ್ತಿದ್ದರು. ಪ್ರತಿಯೊಂದು ವಿಷಯವನ್ನೂ ಇದು ನನ್ನ ಆಧ್ಯಾತ್ಮಿಕ ಆದರ್ಶಕ್ಕೆ ಪೂರಕವೇ ಅಲ್ಲವೇ ಎಂದು ಪರೀಕ್ಷಿಸಿ ನೋಡಬೇಕು ಎಂಬುದು ಅಭಿಪ್ರಾಯ. ಪೂರಕವಲ್ಲದಿದ್ದರೆ, ಆದರ್ಶಕ್ಕೆ ವಿರುದ್ಧವಾಗಿದ್ದರೆ ಅದನ್ನು ಕೈಬಿಡುವಷ್ಟು ವೈರಾಗ್ಯವೂ ಇರಬೇಕಾಗುತ್ತದೆ.

ಪ್ರಾಮಾಣಿಕ ಆಧ್ಯಾತ್ಮಿಕ ಸಾಧನೆಗಳ ಮೂಲಕ ಮನಸ್ಸು ಪರಿಶುದ್ಧವಾದಷ್ಟೂ ವಿವೇಕ ವೈರಾಗ್ಯಗಳು ಜಾಗ್ರತವಾಗುತ್ತವೆ. ಆ ಸಾಧಕನ ಮನಸ್ಸು ಹೇಗೆ ಇರುತ್ತದೆಂಬುದನ್ನು ಶ್ರೀರಾಮಕೃಷ್ಣರು ಒಂದು ಸುಂದರ ಉದಾಹರಣೆಯ ಮೂಲಕ ವಿವರಿಸುತ್ತಾರೆ:

‘‘ಯೋಗಿಗಳ ಮನಸ್ಸು ಸರ್ವದಾ ಭಗವಂತನ ಅಡಿದಾವರೆಗಳಲ್ಲಿ ನೆಲೆಸಿರುತ್ತದೆ — ಸರ್ವದಾ ಆತ್ಮಸ್ಥವಾಗಿರುತ್ತದೆ. ಮುಖ ನೋಡಿದರೆ ಗೊತ್ತಾಗಿಬಿಡುತ್ತದೆ. ಕಣ್ಣೇನೋ ತೆರೆದಿರುತ್ತದೆ, ದೃಷ್ಟಿ ಮಾತ್ರ ಬಹಿರ್ಜಗತ್ತಿನ ಕಡೆಗೇ ಇರುವುದಿಲ್ಲ. ಹಕ್ಕಿ ಕಾವಿಗೆ ಕೂತಿರುವಾಗ ಅದರ ಇಡೀ ಮನಸ್ಸು ಮೊಟ್ಟೆಯ ಮೇಲೆ ನೆಲೆಸಿ ಅದರ ಕಣ್ಣು ಮಾತ್ರ ಮೇಲಕ್ಕೆ ನೋಡುತ್ತಿರುವ ಹಾಗೆ ಕಾಣಿಸುತ್ತದೆ.’’

## ನಿಷ್ಕಾಮಕರ್ಮ

**ಶ್ರೀರಾಮಕೃಷ್ಣರು:** ‘‘ನಿಷ್ಕಾಮಕರ್ಮ ಮಾಡುತ್ತಿರು. ಈಶ್ವರ ಚಂದ್ರ ವಿದ್ಯಾಸಾಗರ ಮಾಡುತ್ತಿರುವ ಕೆಲಸಗಳೆಲ್ಲ ಒಳ್ಳೆಯವೆ. ನಿಷ್ಕಾಮಕರ್ಮ ಮಾಡುತ್ತಿರಲು ಸತತಪ್ರಯತ್ನ ಮಾಡುತ್ತಿರು.’’

ಒಂದು ಯಂತ್ರವು, ಅದಕ್ಕೆ ಕರ್ತೃತ್ವ ಬುದ್ಧಿ ಇಲ್ಲದೆ ಇರುವುದರಿಂದ, ನಿಷ್ಕಾಮಕರ್ಮ ಮಾಡುತ್ತದೆ. ಆದರೆ ಮನುಷ್ಯನು ಯಂತ್ರದಂತೆಯೂ ಇರಬಾರದು, ನಿಷ್ಕಾಮನೂ ಆಗಿರಬೇಕು. ಯಂತ್ರವು ತನಗಾಗಿ ಕೆಲಸ ಮಾಡುವುದಿಲ್ಲ, ಇತರರಿಗಾಗಿ ಮಾಡುತ್ತದೆ. ಹಾಗೆಯೇ ನಾವು ಭಗವಂತನಿಗಾಗಿ ಕೆಲಸ ಮಾಡಬೇಕು — ದೇಹದ ಅಂಗಾಂಗಗಳು ಒಟ್ಟು ವ್ಯಕ್ತಿತ್ವಕ್ಕಾಗಿ ಕೆಲಸ ಮಾಡುವಂತೆ — ಕಣ್ಣು ತನಗೋಸ್ಕರ ನೋಡುವುದಿಲ್ಲ, ಕಿವಿ ತನಗೋಸ್ಕರ ಕೇಳುವುದಿಲ್ಲ ಇತ್ಯಾದಿ. ಇನ್ನೊಂದು ಉದಾಹರಣೆಯನ್ನು ಕೊಡುವುದಾದರೆ ಕಾರು ತಯಾರಿಸುವ ಒಂದು ಕಾರ್ಖಾನೆಯಲ್ಲಿ ವಿವಿಧ ವಿಭಾಗಗಳು ಕಾರಿನ ವಿವಿಧ ಭಾಗಗಳನ್ನು ತಯಾರಿಸುತ್ತವೆ. ಆ ವಿಭಾಗಗಳೆಲ್ಲವೂ ಕಾರ್ಯವೆಸಗುವುದು ಒಟ್ಟು ಕಾರಿನ ತಯಾರಿಕೆಗಾಗಿ ಹೊರತು ತಮಗಾಗಿ ಅಲ್ಲ. ಇಲ್ಲಿ ಭಗವದ್ಗೀತೆಯ ಈ ಕೆಳಗಿನ ಶ್ಲೋಕವನ್ನು ಉದಾಹರಿಸಬಹುದು:

**ಯಜ್ಞಾರ್ಥಾದ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।**

‘‘ಕರ್ಮವನ್ನು ಯಜ್ಞದ ದೃಷ್ಟಿಯಿಂದ ಮಾಡಬೇಕು. ಬೇರೆ ರೀತಿಯಿಂದ ಮಾಡಿದರೆ ಬಂಧನವಾಗುತ್ತದೆ.’’ ಇಡೀ ವಿಶ್ವವೇ ಒಂದು ಯಜ್ಞ. ಅಲ್ಲಿ ನಡೆಯುವ ಎಲ್ಲ ಕ್ರಿಯೆಗಳು ಆ ವಿಶ್ವಯಜ್ಞದ ವಿವಿಧ ಅಂಗಗಳು. ನಮ್ಮ ವಿವಿಧ ಕ್ರಿಯೆಗಳೂ ಕೂಡ. ಈ ಎಲ್ಲ ಕ್ರಿಯೆಗಳು ಅವುಗಳ ಫಲವೂ ಯಜ್ಞಪುರುಷನಾದ ಭಗವಂತನಿಗೆ ಸೇರಿದುದು. ಈ ರೀತಿ ಪೂರ್ಣ ದೃಷ್ಟಿಯಿಂದ ಫಲಾಪೇಕ್ಷೆಯಿಲ್ಲದೆ ನಿಷ್ಕಾಮಕರ್ಮ ಮಾಡುತ್ತಿರು ಎಂದು ಶ್ರೀರಾಮಕೃಷ್ಣರು ಉಪದೇಶಿಸುತ್ತಾರೆ.

ಈಗ ‘ಮ’ ಪ್ರಶ್ನೆ ಕೇಳುತ್ತಾರೆ: ‘‘ಆಗಲಿ ಒಳ್ಳೇದು, ಕರ್ಮಗಳ ಕಡೆ ಮನಸ್ಸು ಕೊಡುತ್ತಾ ಇದ್ದರೆ ಭಗವಂತನ ಸಾಕ್ಷಾತ್ಕಾರ ಪಡೆಯಲಾಗುವುದೆ? ರಾಮ ಕಾಮ ಇಬ್ಬರೂ ಒಟ್ಟಿಗೆ ಇರಲಾಗುವುದೆ? ಹಿಂದಿಯಲ್ಲಿ ಒಂದು ದ್ವಿಪದಿ ಓದಿದೆ: ‘ರಾಮನಿರುವ ಕಡೆ ಕಾಮವಿಲ್ಲ; ಕಾಮವಿರುವ ಕಡೆ ರಾಮನಿಲ್ಲ.’ ’’

**ಶ್ರೀರಾಮಕೃಷ್ಣರು:** ‘‘ಒಬ್ಬೊಬ್ಬರೂ ತಪ್ಪದೆ ಎಲ್ಲರೂ ಕರ್ಮ ಮಾಡುತ್ತಲೇ ಇದ್ದಾರೆ. ಭಗವಂತನ ನಾಮಗುಣಕೀರ್ತನೆ ಮಾಡುವುದೂ ಕರ್ಮವೇ. ‘ಸೋಽಹಂ’ ವಾದಿಗಳ ‘ನಾನೇ ಅವನು’ ಎಂಬುದರ ಮೇಲಿನ ಧ್ಯಾನವೂ ಕರ್ಮವೇ. ಉಸಿರಾಡುವುದೂ ಕರ್ಮವೇ. ಕರ್ಮವನ್ನು ತ್ಯಾಗ ಮಾಡುವ ಹಾಗೇ ಇಲ್ಲ. ಆದ್ದರಿಂದ ಕರ್ಮ ಮಾಡು. ಅದರ ಫಲವನ್ನು ಭಗವಂತನಿಗೆ ಅರ್ಪಿಸಿಬಿಡು.’’

‘ಮ’ ಅವರು ಇಲ್ಲಿ ಕರ್ಮಶಬ್ದವನ್ನು ಸಾಮಾನ್ಯ ಅರ್ಥದಲ್ಲಿ ಅಂದರೆ ಕಾಮ್ಯಕರ್ಮ (ಆಸೆಗಳಿಂದ ಪ್ರೇರಿತವಾದ ಕರ್ಮ) ಎಂಬರ್ಥದಲ್ಲಿ ಉಪಯೋಗಿಸಿದ್ದಾರೆ. ಕತ್ತಲೆ ಬೆಳಕು ಒಟ್ಟಿಗೆ ಇರಲಾಗದಂತೆ, ರಾಮ ಕಾಮ ಒಟ್ಟಿಗೆ ಇರಲಾಗುವುದಿಲ್ಲ. ಈ ಎರಡೂ ಪದಗಳಲ್ಲೂ ‘ಮ’ ಅಕ್ಷರವು ಸಮಾನ. ಮ ಎಂದರೆ ಮನಸ್ಸು. ಅದಕ್ಕೆ ‘ಕಾ’ ಸೇರಿಸಿದರೆ ಲೌಕಿಕ, ‘ರಾ’ ಸೇರಿಸಿದರೆ ಆಧ್ಯಾತ್ಮಿಕ. ‘ಕ’ ಎಂಬ ಅಕ್ಷರವೇ ಕರ್ಕಶ, ಕಿವಿಗೆ ಇಂಪಾಗಿರುವುದಿಲ್ಲ — ಕಾಗೆಯ ಧ್ವನಿಯಂತೆ. ಯೋಗಿಯಾದವನಿಗೆ ಪ್ರಾಪಂಚಿಕ ಸುಖವು ದುಃಖದಾಯಕ. ‘ರ’ ಎಂದರೆ ರಂಜಿಸುವುದು — ಹೃದಯಕ್ಕೆ ರಂಜನೆ. ಯೋಗಿಯನ್ನು ರಂಜಿಸುವುದು ಆಧ್ಯಾತ್ಮಿಕವೊಂದೇ.

ಕರ್ಮ ಅನಿವಾರ್ಯ, ಸುಮ್ಮನೆ ಕುಳಿತುಕೊಂಡಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಕರ್ಮ ನಡೆಯುತ್ತಲೇ ಇರುತ್ತದೆ. ದೇಹ ಮನಸ್ಸುಗಳು ಕೆಲಸ ಮಾಡುತ್ತಲೇ ಇರುತ್ತವೆ, ಕರ್ಮವೇ ಅವುಗಳ ಸ್ವಭಾವ. ಏಕೆಂದರೆ ಅವುಗಳು ಪ್ರಕೃತಿಯ ಉತ್ಪನ್ನಗಳು, ಪ್ರಕೃತಿಯು ಕರ್ಮಮಯಿ, ಕ್ರಿಯೆಯೇ ಅದರ ಸ್ವರೂಪ – ಸುಡುವುದೇ ಅಗ್ನಿಯ ಸ್ವರೂಪವಾಗಿರುವಂತೆ. ಆದ್ದರಿಂದ, ಶ್ರೀರಾಮಕೃಷ್ಣರ ಪ್ರಕಾರ, ಕರ್ಮವು ಅನಿವಾರ್ಯವಾಗಿರುವುದರಿಂದ ನಿಷ್ಕಾಮಭಾವದಿಂದ ಕರ್ಮ ಮಾಡಬೇಕು. ಕೆಲಸವಿಲ್ಲದಾಗ ಅನ್ಯಚಿಂತನೆ ಬಾರದಿದ್ದರೆ ಆಗ ಕೆಲಸ ಬಿಡಲು ನಾವು ಅರ್ಹರು ಎಂದೆನ್ನಬಹುದು. ವಿಷಯ ಚಿಂತನೆ ಇರುವುದಾದರೆ ಕೆಲಸ ಮಾಡುವುದೇ ಲೇಸು. ಕೆಲಸದಲ್ಲಿ ಅಸಹನೆಯಿದ್ದರೆ, ಗೊಣಗಾಟವಿದ್ದರೆ ಮತ್ತಷ್ಟು ಕೆಲಸ ಅಂಟಿಕೊಳ್ಳುತ್ತದೆ.

ಒಬ್ಬ ಸಾಧುವು ಕಾಡಿನಲ್ಲಿ ಓಡಾಡುತ್ತಿರುವಾಗ ಒಮ್ಮೆ ಒಂದು ಆಶ್ಚರ್ಯಕರ ದೃಶ್ಯವನ್ನು ಕಂಡನು. ಒಂದು ನರಿ ಕಾಲು ಮುರಿದುಕೊಂಡು ಬಿದ್ದಿತ್ತು, ಅದಕ್ಕೆ ಓಡಾಡಲು ಆಗುತ್ತಿರಲಿಲ್ಲ. ಅಷ್ಟರಲ್ಲಿ ಒಂದು ಹುಲಿಯು ಬಂತು. ನರಿಗೆ ತಪ್ಪಿಸಿಕೊಳ್ಳಲಾಗದೆ ಇರುವುದರಿಂದ ಹುಲಿಯು ಅದನ್ನು ತಿಂದು ಹಾಕುತ್ತದೆ ಎಂದು ಭಾವಿಸಿ, ಏನಾಗುತ್ತದೆ ನೋಡೋಣವೆಂದು ಒಂದು ಮರದ ಹಿಂದೆ ನಿಂತುಕೊಂಡು ನೋಡತೊಡಗಿದನು. ಹುಲಿಯು ನರಿಯ ಹತ್ತಿರ ಹೋಗಿ ತಾನು ಬಾಯಲ್ಲಿ ಕಚ್ಚಿಕೊಂಡು ತಂದಿದ್ದ ಒಂದು ಮಾಂಸದ ತುಂಡನ್ನು ನರಿಗೆ ತಿನ್ನಿಸಿ ಹೋಯಿತು. ಇದನ್ನು ಕಂಡು ಸಾಧು ಭಾವಿಸಿದ: ‘‘ದೇವರು ಎಲ್ಲರಿಗೂ

ಅವರವರ ಆಹಾರವನ್ನು ಒದಗಿಸುತ್ತಿದ್ದಾನೆ. ನಾನಾದರೂ ಭಿಕ್ಷೆಗಾಗಿ ಏತಕ್ಕೆ ಅಷ್ಟೊಂದು ಅಲೆದಾಡಬೇಕು. ಈ ನರಿಗೆ ಕ್ರೂರ ಪ್ರಾಣಿಯಾದ ಹುಲಿಯಿಂದಲೇ ಆಹಾರವನ್ನು ಒದಗಿಸುತ್ತಿರುವಾಗ, ದೇವರು ನನ್ನನ್ನು ಕೈಬಿಡುತ್ತಾನೆಯೆ!'' ಹೀಗೆಂದು ಭಾವಿಸಿ ಅವನು ಮರುದಿನದಿಂದ ಭಿಕ್ಷೆ ಬೇಡುವುದನ್ನು ರದ್ದು ಪಡಿಸಿದನು. ಒಂದು ದಿನವಾಯಿತು, ಎರಡು ದಿನವಾಯಿತು, ಮೂರು ದಿನ ಕಳೆದರೂ ಯಾವ ರೀತಿಯಿಂದಲೂ ಆಹಾರ ಬರದಿರಲು, ಹಸಿವನ್ನು ತಾಳಲಾರದೆ ಸಾಧುವು ಭಗವಂತನನ್ನು ದೂರತೊಡಗಿದನು.: ''ಹೇ ಪ್ರಭು, ನಿನ್ನನ್ನು ನೆಚ್ಚಿ ನಾ ಕೆಟ್ಟೆ, ಈಗ ನಾನೇನು ಮಾಡಲಿ!'' ದೇವರು ಉತ್ತರಿಸಿದನು. ''ಹುಲಿಯನ್ನು ಅನುಸರಿಸು, ನರಿಯನ್ನಲ್ಲ''

## ಭಗವಂತನ ಸೇವೆ

'ಮ' ಅವರು ಕೇಳುತ್ತಾರೆ ''ಒಳ್ಳೆಯದು, ಹೆಚ್ಚಾಗಿ ಹಣ ಸಂಪಾದಿಸಲು ನಾನು ಪ್ರಯತ್ನಿಸಬಹುದೆ?''

**ಶ್ರೀರಾಮಕೃಷ್ಣರು:** ''ವಿದ್ಯಾಸಂಸಾರದ ಸಲುವಾಗಿ ಬೇಕಾದರೆ ಹಾಗೆ ಮಾಡಬಹುದು. ಹೆಚ್ಚಾಗಿ ಧನಾರ್ಜನೆ ಮಾಡು, ಆದರೆ ಒಳ್ಳೆಯ ರೀತಿಯಿಂದ. ಜೀವನದ ಉದ್ದೇಶ ಧನಾರ್ಜನೆಯಲ್ಲ, ಭಗವಂತನ ಸೇವೆ. ಧನಾರ್ಜನೆಯಿಂದ ನಡೆಯುವುದಾದರೆ ಅದು ದೋಷವಾದುದೇನೂ ಅಲ್ಲ.''

ಪತಿ-ಪತ್ನಿಯರಿಬ್ಬರು ಆಧ್ಯಾತ್ಮಿಕ ಬಲವುಳ್ಳವರಾಗಿದ್ದರೆ ಆ ಸಂಸಾರವನ್ನು ವಿದ್ಯಾಸಂಸಾರವೆಂದು ಕರೆಯಬಹುದು. ಅಂತಹ ಸಂಸಾರದ ನಿರ್ವಹಣೆಗೆ ಹಣಸಂಪಾದನೆ ಮಾಡಲೇಬೇಕು, ಆದರೆ ಧರ್ಮಸಮ್ಮತವಾಗಿ ಮಾಡಬೇಕು. ಈ ಅಭಿಪ್ರಾಯವನ್ನು ವ್ಯಕ್ತಪಡಿಸುವ ಶ್ಲೋಕವೊಂದಿದೆ:

**ಸರ್ವೇಷಾಮಪಿ ಶೌಚಾನಾಮರ್ಥಶೌಚಂ ಪರಂ ಸ್ಮೃತಮ್ ।**
**ಯೋಽರ್ಥಶುಚಿಃ ಸ ಶುಚಿಃ ನ ಮೃದ್ವಾರಿಶುಚಿಃ ಶುಚಿಃ ॥**

''ಎಲ್ಲ ಬಗೆಯ ಶೌಚಗಳಿಗಿಂತ ಅರ್ಥಶೌಚವೇ ಪರಮ ಶ್ರೇಷ್ಠವಾದುದು (ಅರ್ಥಶೌಚವೆಂದರೆ ನ್ಯಾಯಬದ್ಧವಾಗಿಯೂ, ನೀತಿಬದ್ಧವಾಗಿಯೂ ಹಣ ಸಂಪಾದಿಸುವುದು). ಯಾರು ಅರ್ಥ ಶುಚಿಯೋ ಅವನೇ ಶುಚಿಯಾದ ವ್ಯಕ್ತಿ, ಕೇವಲ ಮೃತ್ತಿಕೆ, ನೀರು ಮುಂತಾದವುಗಳ ಮೂಲಕ ಶುಚಿಯಾದವನು-ಮಡಿ-ಮೈಲಿಗೆ ಮಾಡುವವನು-ಶುಚಿಯೇ ಅಲ್ಲ.''

ಧರ್ಮಾರ್ಜನೆಯಿಂದ ಭಗವಂತನ ಸೇವೆಯಾಗಬೇಕೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅನೇಕ ಹಣವಂತರು ದೇವಾಲಯಗಳಲ್ಲಿ ದೇವರಿಗೆ ಚಿನ್ನದ ಕಿರೀಟ ಮಾಡಿಸುವುದು, ಬೆಳ್ಳಿ ರಥ ಮಾಡಿಸುವುದು, ದೇವರಿಗೆ ಮತ್ತೆ ಮತ್ತೆ ಮದುವೆ ಮಾಡಿಸುವುದು (ಕಲ್ಯಾಣ ಸೇವೆ) ಇತ್ಯಾದಿಗಳನ್ನು ಭಗವಂತನ ಸೇವೆಯೆಂದು ಪರಿಗಣಿಸಲಾಗುವುದಿಲ್ಲ. ಬಡವರಿಗೆ ದಾನಧರ್ಮ ಮಾಡುವುದರಿಂದ, ಅವರಿಗೆ ವಿವಿಧ ರೀತಿಯಲ್ಲಿ ಸಹಾಯ ಮಾಡುವುದರಿಂದ ನಿಜವಾದ ಭಗವಂತನ ಸೇವೆಯಾಗುತ್ತದೆ.

ಟಾಲ್‌ಸ್ಟಾಯ್ ಹೇಳಿರುವ ಒಂದು ಕಥೆ ಇಲ್ಲಿ ಹೆಚ್ಚು ಉಚಿತವೆನಿಸುತ್ತದೆ. ತುಂಬ ದೇವಭಕ್ತನಾದ ಒಬ್ಬ ಮೋಚಿಯಿದ್ದನು. ಅವನಿಗೆ ಒಂದು ದಿನ ಒಳ್ಳೆಯ ಕನಸು ಬಿತ್ತು. ಆ ಕನಸಿನಲ್ಲಿ ದೇವರು ಕಾಣಿಸಿಕೊಂಡು, ''ನಾಳೆ ಬೆಳಗ್ಗೆ ನಾನು ನಿನ್ನ ಮನೆಗೆ ಬರುತ್ತೇನೆ'' ಎಂದು ಹೇಳಿದನು. ತಕ್ಷಣ ಮೋಚಿಯು ಎಚ್ಚರಗೊಂಡು ದೇವರನ್ನು ಬರಮಾಡಿಕೊಳ್ಳಲು ಎಲ್ಲ ರೀತಿಯ ವ್ಯವಸ್ಥೆಯಲ್ಲಿ ತೊಡಗಿದನು. ಅತ್ಯಾದರದಿಂದ, ವ್ಯಾಕುಲತೆಯಿಂದ ದೇವರ ಬರವನ್ನೇ ಕಾಯುತ್ತ ಬಾಗಿಲಲ್ಲಿ ನಿಂತುಕೊಂಡಿದ್ದನು. ಮುಂಜಾನೆ ಓರ್ವ ಬಡ ಮಹಿಳೆ ಬೀದಿ ಗುಡಿಸುತ್ತ ಬಂದಳು. ಆಗ ಅತ್ಯಂತ ತಡೆಯಲಾಗದ ಚಳಿ, ಆಕೆ ಬೆಚ್ಚನೆಯ ಉಡುಪಿಲ್ಲದೆ ತುಂಬ ಸಂಕಟಪಡುತ್ತಿದ್ದಳು. ಮೋಚಿಯು ಆಕೆಯನ್ನು ಮನೆಗೆ ಕರೆದು, ಬಿಸಿಬಿಸಿ ಚಹಾ ಕೊಟ್ಟು ಶಾಲು ಹೊದಿಸಿ ಉಪಚರಿಸಿ ಕಳಿಸಿಕೊಟ್ಟನು. ಮತ್ತೆ ದೇವರಿಗಾಗಿ ಕಾಯುತ್ತ ನಿಂತನು. ಸ್ವಲ್ಪ ಹೊತ್ತಿನಲ್ಲಿ ಇನ್ನೋರ್ವ ಬಡ ಮಹಿಳೆ ಒಂದು ಮಗುವನ್ನು ಕಂಕುಳಲ್ಲಿ ಇಟ್ಟುಕೊಂಡು ಬಂದಳು. ಇಬ್ಬರೂ ಹಸಿವಿನಿಂದ ನರಳುತ್ತಿದ್ದಾರೆ. ಮಗುವಿಗೆ ಹಾಲು ಕುಡಿಸುವುದಕ್ಕೂ ಆಕೆಗೆ ಗತಿಯಿಲ್ಲ. ಮೋಚಿಯು ಆಕೆಯನ್ನೂ ಮನೆಯೊಳಗೆ ಕರೆದು ಆವಶ್ಯಕ ಸೇವೆಯನ್ನು ಸಲ್ಲಿಸಿ ಕಳಿಸಿಕೊಟ್ಟನು. ಮತ್ತೆ ದೇವರಿಗಾಗಿ ಹಂಬಲದಿಂದ ಬಾಗಿಲಲ್ಲಿ ಕಾಯುತ್ತಾ ನಿಂತುಕೊಂಡನು. ದಿನವೆಲ್ಲ ಕಳೆದರೂ ಯಾರೂ ಬರಲಿಲ್ಲ. ಸಂಜೆಯ ಹೊತ್ತು ಒಬ್ಬ ಮುದುಕಿ ಮತ್ತು ಹುಡುಗ ಜೋರಾಗಿ ಜಗಳವಾಡುತ್ತಿರುವುದನ್ನು ನೋಡಿದನು. ಮುದುಕಿಯು ಹಣ್ಣಿನ ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದಳು. ಹಿಂದಿನಿಂದ ಒಬ್ಬ ಹುಡುಗ ಹಾರಿ ಬಂದು ಹಣ್ಣನ್ನು ಕದ್ದನು. ಮುದುಕಿಗೆ ಗೊತ್ತಾಗಿ, ಬುಟ್ಟಿಯನ್ನು ಕೆಳಗಿರಿಸಿ ಆ ಹುಡುಗನೊಡನೆ ಜಗಳ ಪ್ರಾರಂಭಿಸಿದಳು. ಜಗಳ ಬಿರುಸಿನಿಂದ ಸಾಗಿತ್ತು. ಮೋಚಿಯು ಬಂದು ಅವರನ್ನು ಸಮಾಧಾನ ಪಡಿಸಿ, ಮುದುಕಿಯೇ ಅವನಿಗೆ ಒಂದು ಹಣ್ಣನ್ನು ಕೊಡುವಂತೆಯೂ, ಹುಡುಗನು ಬುಟ್ಟಿಯನ್ನು ಎತ್ತಿ ಅವಳ ತಲೆಯ ಮೇಲೆ ಇರಿಸುವಂತೆಯೂ ಮಾಡಿದನು.

ಹೀಗೆ ಅವರ ಜಗಳವನ್ನು ಪರಸ್ಪರ ಪ್ರೀತಿಯಲ್ಲಿ ಕೊನೆಗೊಳ್ಳುವಂತೆ ಮಾಡಿ ಮೋಚಿಯು ಮನೆಗೆ ಹಿಂದಿರುಗಿದನು. ದೇವರು ಮಾತುಕೊಟ್ಟಂತೆ ಬರಲೇ ಇಲ್ಲವೆಂದು ನಿರಾಸೆಯೊಂದಿಗೆ ರಾತ್ರಿ ಮಲಗಿ ನಿದ್ರಿಸಿದನು. ಮತ್ತೆ ಕನಸು, ಮತ್ತೆ ಭಗವದ್ವಾಣಿ: ''ನಾನು ಮೂರು ಬಾರಿ ನಿನ್ನ ಮನೆಗೆ ಬಂದೆ. ಮೂರು ಬಾರಿಯೂ ನೀನು ನನ್ನನ್ನು ಚೆನ್ನಾಗಿ ನೋಡಿಕೊಂಡಿರುವೆ, ತುಂಬ ಸಂತೋಷ.'' ಈ ಕಥೆಯು ನಾವು ಭಗವಂತನ ಸೇವೆಯನ್ನು ಯಾವ ರೀತಿ ಮಾಡಬೇಕೆಂಬುದನ್ನು ತುಂಬ ಅರ್ಥಪೂರ್ಣವಾಗಿ ಸೂಚಿಸುತ್ತದೆ. ನಾವು ಮಕ್ಕಳನ್ನು ಕಡೆಗಣಿಸಿ ತಂದೆಯನ್ನು ಮೆಚ್ಚಿಸಲಾಗುವುದಿಲ್ಲ.

*(ಮುಂದುವರಿಯುವುದು)*